ಯಾರಿಂದಲೋ ಅವರೇ ದಾರಿ ತಪ್ಪಿಬಿಟ್ಟಿದ್ದಾರೆ, ಈಗ ಅಧ್ಯಕ್ಷರೇ ನಾನು ಗಂಭೀರವಾಗಿ ಹೇಳುತ್ತಿದ್ದೇನೆ, ಉಪಾಧ್ಯಾಯರು ಲೆಕ್ಚರರ್ ಯಾವುದೇ ಖಾಲಿ ಹುದ್ದೆ ಇರುತ್ತವೆ ಅವನ್ನು ಭರ್ತಿ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ, ಆರೋಗ್ಯ ಶಿಕ್ಷಣ ಪೊಲೀಸ್ ಇದಕ್ಕೆ ಎಕಾನಮಿ ಆರ್ಡರ್ ಜನರಲ್ಲಾಗಿ ಅಪ್ಲೈ ಆಗುವುದಿಲ್ಲ, ಒಂದೇನಪ್ಪ ಅಂದರೆ ಅರ್ಥ ಇಲಾಖೆ ಒಪ್ಪಿಗೆ ಪಡೆದು ಮಾಡಬೇಕಾಗುತ್ತದೆ. ಅವರು ಪ್ರಸ್ತಾವ ಕಳಿಸಿಕೊಟ್ಟರೆ ನಾವು ಕೊಡುತ್ತೇವೆ.

ಅವರು ಪ್ರಸ್ತಾವವನ್ನು ಕಳುಹಿಸಿಕೊಟ್ಟರೆ ನಾವು ಕೊಡುತ್ತೇವೆ.

ಅಧ್ಯಕ್ಷರು : ಅವರು ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿ.ಎಂ. ಉದಾಸಿ – ಅವರು ಉತ್ತರ ಕೊಟ್ಟಿದ್ದನ್ನು ಒಪ್ಪುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪಮುಖ್ಯಮಂತ್ರಿಗಳು) :– Categorically I am giving the assurance.

ಅಧ್ಯಕ್ಷರು: ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ ಈ ಸಮಸ್ಯೆ ಬಹಳ ಗಂಭೀರವಾಗಿದೆ ಎಂದು ಎಲ್ಲಾ ಕಡೆ ಸದಸ್ಯರು ಇದನ್ನು ಹೇಳುತ್ತಿದ್ದಾರೆ. ತಾವು ನೇತೃತ್ವವನ್ನು ವಹಿಸಿ ಪ್ರಾಥಮಿಕ ಶಿಕ್ಷಣ ಸಚಿವರು ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ಎಲ್ಲಾ ಅಸ್ಪೆಕ್ಟ್‌ನ್ನೂ ಚರ್ಚೆ ಮಾಡಿ ಇದಕ್ಕೊಂದು ಇಮ್ಮಿಡಿಯೇಟ್ ಆದ ಪರಿಹಾರವನ್ನು ಕೊಡಿ.

ಶ್ರೀ ಸಿದ್ದರಾಮಯ್ಯ : I will takelead to call the officers, Minister concerned and take a decision.

154 (2530) **ಶ್ರೀ ಸುನಿಲ್ ವಲ್ಲಾಪುರೆ** (ಶಹಾಬಾದ್) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಶಹಾಬಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೆತ್ತಿಕೊಂಡ ಗ್ರಾಮೀಣ ನೀರು ಸರಬರಾಜು ಯೋಜನೆಗಳಾವುವು?

ಆ) ಈ ಯೋಜನೆಗಳಿಗೆ ವ್ಯಯಿಸಲಾದ ಹಣಕಾಸಿನ ಮೊತ್ತವೆಷ್ಟು?

ಇ) ಶಹಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ 2003–04ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಾವುವು?

ಈ) ಶಹಾಬಾದ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರ ಪರಿಸ್ಥಿತಿ ಎದುರಿಸಲು ವಿಶೇಷ ಯೋಜನೆಗಳನ್ನೇನಾದರೂ ರೂಪಿಸಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು?

ಡಾ|| ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಶಹಾಬಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ 8 ಕೊಳವೆ ನೀರು ಸರಬರಾಜು, 15 ಕಿರು ನೀರು ಸರಬರಾಜು ಮತ್ತು 79 ಕೈಪಂಪು ಕೊಳವೆ ಬಾವಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಆ) ಈ ಸಲುವಾಗಿ ಒಟ್ಟಾರೆ ರೂ. 94.64 ಲಕ್ಷ ವೆಚ್ಚ ಮಾಡಲಾಗಿದೆ.

ಇ) 2003–04 ರಲ್ಲಿ ನಂದೂರು (ಬಿ) ಮತ್ತು ಯರತೂರು ಗ್ರಾಮಗಳಿಗಾಗಿ ಒಟ್ಟು ರೂ.7.16 ಲಕ್ಷ ಅಂದಾಜಿನಲ್ಲಿ 2 ಕಿರು ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಈ) ಸದರಿ ಕ್ಷೇತ್ರದ ಕುಡಿಯುವ ನೀರಿನ ಬರ ಪರಿಸ್ಥಿತಿ ಎದುರಿಸಲು ನಿಡಿಸಿನ್ನೂರ ಶ್ಯಾಲೋವೆಲ್ ಮತ್ತು ಪೈಪ್‌ಲೈನ್ ಕಾಮಗಾರಿ ಸೇರಿದಂತೆ ಹೊನಗುಂಟ್ ವಡ್ಡರ ಪಾಡ, ಭಂಕೂರ, ನಾಲವಾರ, ಭಂಕೂರ ವಿ.ಬಿ.ಎಲ್, ಜಾಫರಾಬಾದ, ನಂದೂರು (ಬಿ) ಜೋಕ್ಲಾನಾಯಕ್ ತಾಂಡ, ನದಿಸಿನ್ನೂರು, ಉದನೂರು, ನಡುವಿನಹಳ್ಳಿ ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಒದಗಿಸಲು ಒಟ್ಟು ರೂ.4.20 ಲಕ್ಷ ಅಂದಾಜು ವೆಚ್ಚದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಈಗ ರಚಿಸಲಾಗಿರುವ ತಾಲ್ಲೂಕು ಮಟ್ಟದ ಕಾರ್ಯಪಡೆ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಸಂದರ್ಭಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್): ಮಾನ್ಯ ಅಧ್ಯಕ್ಷರೇ, 2003–04ನೇ ಸಾಲಿನಲ್ಲಿ ಕುಡಿಯುವ ನೀರಿಗಾಗಿ 2.16 ಲಕ್ಷ ರೂಪಾಯಿಗಳನ್ನು ಎರಡು ಕಿರು ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ ಎನ್ನುವ

ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಎರಡು ನಂದೂರು ಮತ್ತು ಯರತೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲಿಯವರೆಗೆ ಆಗಿಲ್ಲ. ಒಂದು ಹನಿ ನೀರು ಕೂಡ ಇಲ್ಲಿ ಬಿಟ್ಟಿಲ್ಲ, ಸುಳ್ಳು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಜೊತೆಗೆ ನಮ್ಮ ಶಹಾಬಾದ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರ ಪರಿಸ್ಥಿತಿ ಎದುರಿಸಲು ವಿಶೇಷ ಯೋಜನೆಗಳನ್ನೇನಾದರೂ ರೂಪಿಸಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ, ಈಗಾಗಲೇ ವರ್ಲ್ಡ್ ಬ್ಯಾಂಕ್‌ನಲ್ಲಿ ನಮ್ಮ ಕುಂಬಾರಹಳ್ಳಿ ಎಂದು ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಕುಂಬಾರಳ್ಳಿ ಎನ್ನುವ ಗ್ರಾಮದಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ಒಂದು ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಇಲ್ಲಿಯವರೆಗೆ ಎರಡು ವರ್ಷವಾದರೂ ಒಂದು ಹನಿ ನೀರು ಆ ಟ್ಯಾಂಕಿಗೆ ಏರಿಸಿಲ್ಲ. ಇಲ್ಲಿಯವರೆಗೆ ಆ ಜನರಿಗೆ ನೀರನ್ನು ಕೊಟ್ಟಿಲ್ಲ. ಜೊತೆಯಲ್ಲಿ 79 ಕೊಳವೆಬಾವಿಗಳನ್ನು ಒದಗಿಸಿದ್ದೇವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಆ 79 ಕೊಳವೆಬಾವಿಗಳು ಹೇಗೆ ಆಗಿವೆ ಎಂದರೆ ಉದಾ:ಯಾಗಿ ಕುಂಬಾರಳ್ಳಿಯದನ್ನೇ ಕೊಡುತ್ತೇನೆ. ಅಲ್ಲಿ 4 ಬೋರ್‌ವೆಲ್‌ಗಳನ್ನು ತೋಡಿದ್ದಾರೆ, ಆ ಬೋರ್‌ವೆಲ್‌ಗಳು ಊರು ಬಿಟ್ಟು ಸುಮಾರು 4 ರಿಂದ 5 ಕಿಲೋಮೀಟರ್ ದೂರ ಇರುವಷ್ಟು ಇದೆ. ವೈಯಕ್ತಿಕವಾಗಿ ಅಧಿಕಾರಿಗಳು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ತಮಗೆ ಹೇಗೆ ಅನುಕೂಲವಾಗುತ್ತದೋ ಹಾಗೆಯೇ ಆ ಬೋರ್‌ವೆಲ್‌ಗಳನ್ನು ತೋಡಿದ್ದಾರೆ. ಆ ಊರಿಗೆ ಒಂದು ಹನಿ ನೀರಿನ ಪ್ರಯೋಜನ ಕೂಡ ಆಗುತ್ತಿಲ್ಲ.

ಅಧ್ಯಕ್ಷರು : ಪ್ರಶ್ನೆ ಕೇಳಿ, ನೀವು ಎಕ್ಸ್‌ಪ್ಲೈನ್ ಮಾಡುತ್ತಾ ನಿಂತುಕೊಂಡರೆ ಹೇಗೆ?

ಶ್ರೀ ಸುನೀಲ್ ವಲ್ಲಾಪುರೆ : ಮಾನ್ಯ ಅಧ್ಯಕ್ಷರೇ, ಈ ರೀತಿ ನಮ್ಮ ಚಿತ್ತಾಪುರ ಜಿಲ್ಲಾ ಪಂಚಾಯಿತಿಯಲ್ಲಿ ನಡೆಯುತ್ತಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳು ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಜೊತೆಯಲ್ಲಿ ಗುಲ್ಬರ್ಗ ಜಿಲ್ಲೆ 46 ಡಿಗ್ರಿ ಟೆಂಪರೇಚರ್‌ನಲ್ಲಿ ನಾವು ಇವತ್ತು ಬಳಲುತ್ತಿದ್ದೇವೆ. ಗುಲ್ಬರ್ಗ ತಾಲ್ಲೂಕಿನಲ್ಲಿ ಕಿರಣಿಗೆ ಎನ್ನುವ ಊರಿದೆ, ಅಲ್ಲಿ ಜನರು ಕಾಂಟ್ರಿಬ್ಯೂಷನ್

ಕೂಡ ಕೊಟ್ಟಿದ್ದಾರೆ, ಒಂದು ಕುಡಿಯುವ ನೀರಿನ ಯೋಜನೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಹೇಳಿ ಕೇಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, 2003–04ನೇ ಸಾಲಿಗೆ ನಂದೂರು (ಬಿ) ಗ್ರಾಮದ ಕಿರು ನೀರು ಸರಬರಾಜು ಯೋಜನೆಗಾಗಿ 4.48 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಅದೇ ರೀತಿ ಯರತೂರು ಗ್ರಾಮ ಕಿರುನೀರು ಯೋಜನೆಗೆ 2.68 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಯೋಜನೆಗಳನ್ನು ಪೂರ್ಣಗೊಳಿಸಿ ಕಾರ್ಯಗೊಳಿಸಲಾಗಿದೆ ಎಂದು ಅಧಿಕಾರಿಗಳು ನನಗೆ ಕೊಟ್ಟಿದ್ದಾರೆ. ಆದರೆ ಮಾನ್ಯ ಶಾಸಕರು ಅಲ್ಲಿ ಕೆಲಸವೇ ಆಗಿಲ್ಲವೆಂದು ಹೇಳುತ್ತಿದ್ದಾರೆ. ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಇದು ಬಹಳ ಗಂಭೀರವಾದ ವಿಚಾರ. ಈಗ ಅನೇಕ ಸಾರಿ ನಮ್ಮ ಸದಸ್ಯರುಗಳು ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದಾರೆ ಅಧಿಕಾರಿಗಳು ಎಂದು ಅನೇಕ ಪ್ರಶ್ನೆಗಳು ಬಂದಾಗ ಬೇರೆ ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಖಚಿತವಾಗಿ ನಿಮಗೇನಾದರೂ ಸುಳ್ಳು ಮಾಹಿತಿಗಳನ್ನು ನಿಮ್ಮ ಇಲಾಖೆಯ ಅಧಿಕಾರಿಗಲು ಒದಗಿಸಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಇಲಾಖೆಯಾಗಲಿ.

ಶ್ರೀ ಬಿ. ಸತ್ಯನಾರಾಯಣ : ಖಂಡಿತಾ.

ಅಧ್ಯಕ್ಷರು : ನಾನು ಎಲ್ಲಾ ಮಂತ್ರಿಗಳಿಗೆ ಸೂಚನೆ ಕೊಡುವುದೇನೆಂದರೆ ಬಹಳ ಗಂಭೀರವಾಗಿ ತಾವು ಕನ್‌ಸಿಡರ್ ಮಾಡಬೇಕಾಗುತ್ತದೆ. ಇದರ ಬಗ್ಗೆ ನೀವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ : ಸನ್ಮಾನ್ಯ ಶಾಸಕರು ಅದರ ಬಗ್ಗೆ ನನಗೆ ವಿವರವನ್ನು ಕೊಟ್ಟರೆ ಸಂಬಂಧಪಟ್ಟ ಅಧಿಕಾರಿಗಳನ್ನು ಈ ತತ್‌ಕ್ಷಣವೇ ಸಸ್ಪೆಂಡ್ ಮಾಡಿ ಮುಂದಿನ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಸ್ವಾಮಿ.

ಅಧ್ಯಕ್ಷರು : ಆಯಿತು, ಮುಂದೆ ಹೋಗೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಮಧ್ಯೆ ಪ್ರವೇಶ ಮಾಡುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಹಿರಿಯ ಸಚಿವರಾದ ಸಿದ್ದರಾಮಯ್ಯನವರು ಇದ್ದಾರೆ, ಯಾವುದೇ ಪ್ರಶ್ನೆಗಳು ಬಂದರೆ ಹಿಂದಿನ ದಿವಸ ಆ ಮಂತ್ರಿಗಳು ಆ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಬ್ರೀಫ್ ಮಾಡಿ ನಂತರ ಅವರಿಗೆ ಸಮಾಧಾನವಾದ ಮೇಲೆ ಇಲ್ಲಿಗೆ ಬಂದು ಉತ್ತರವನ್ನು ಕೊಡುತ್ತಾರೆ. ಸರಿಯಿಲ್ಲದಿದ್ದರೆ ಅವರೇ ಬಂದು ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ಈ ರೀತಿ ಅನೇಕಭಾರಿ ಘಟನೆಗಳು ನಡೆದಿವೆ. ಒಂದು ಸಾರಿ ಕೊಟ್ಟಂಥ ಉತ್ತರವನ್ನು ಪರಿಶೀಲನೆ ಮಾಡಿ ಇದು ಸರಿಯೋ ಅಲ್ಲವೋ ಎಂದು ಮಂತ್ರಿಗಳು ತಿಳಿದುಕೊಳ್ಳದೇ ಇಲ್ಲಿಗೆ ಬಂದು ಅಥವಾ ಅಧಿಕಾರಿಗಳು ಏನೋ ಕೊಟ್ಟರೆ ತಪ್ಪು ಮಾಹಿತಿ ಇದ್ದರೆ ಅದನ್ನು ಸರಿಪಡಿಸಿಕೊಂಡು ಇಲ್ಲಿ ಬರದಿದ್ದರೆ ಈ ಪ್ರಶ್ನೋತ್ತರದ ಮಹತ್ವವೇನಾಗುತ್ತದೆ ಸಾರ್. ನೀವು ವಾರ್ನ್ ಮಾಡಿದ್ದು ಸರಿ, ನೀವು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದು ಸರಿ, ಆದರೆ ಮಂತ್ರಿಗಳ ಜವಾಬ್ದಾರಿಯಿಂದ ಅಧಿಕಾರಿಗಳ ಜೊತೆ ಸಮಾಲೋಚನೆಯನ್ನು ಮಾಡಿ ಸ್ಪಷ್ಟವಾದ ಉತ್ತರವನ್ನು ತೆಗೆದುಕೊಂಡು ಅವರಿಗೆ ಮನಸ್ಸಿಗೆ ಸಮಾಧಾನವಾದ ಮೇಲೆ ಇಲ್ಲಿಗೆ ಬಂದು ಉತ್ತರವನ್ನು ಕೊಡಬೇಕಾಗುತ್ತದೆ. ಅದನ್ನು ದಯಮಾಡಿ ಹೇಳಿ.

ಅಧ್ಯಕ್ಷರು: ಆಯಿತು. ಮುಂದಕ್ಕೆ ಹೋಗೋಣ. ಇದನ್ನು ಗಂಭೀರವಾಗಿ ದಯಮಾಡಿ ಎಲ್ಲಾ ಮಂತ್ರಿಗಳು ತೆಗೆದುಕೊಳ್ಳಬೇಕು.

(1821) **ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ)** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಮೂರು ವರ್ಷ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದವರ ಸಂಖ್ಯೆ ಎಷ್ಟು?

ಇ) ಮೂರು ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?